ಶ್ರೀ ಹೆಚ್. ಡಿ. ದೇವೇಗೌಡ.— ಪಟ್ಟಿ ಮಾಡತಕ್ಕಂತಹ ಕಾಲದಲ್ಲಿ ಅವರನ್ನೇ ಕೇಳಿದ್ದೇನೆ ಆದ್ಯತೆ ಮೇಲೆ ಕೊಡಿ ಎಂದು ಗುಲ್ಬರ್ಗಾ ಜಿಲ್ಲೆಯಲ್ಲಿ ಹೈಯೆಸ್ಟ್ ವರ್ಕ್ ಏನಾದರೂ ಇನ್‌ಕ್ಲೂಡ್ ಆಗಿದ್ದರೆ ಅದು ಮಾನ್ಯ ಖರ್ಗೆಯವರ ಕ್ಷೇತ್ರದಲ್ಲಿ. ಆ ಕೆಲಸಗಳನ್ನು ಬಿಟ್ಟು ಇದನ್ನು ತೆಗೆದುಕೊಳ್ಳಿ ಎಂದು ಇವರು ಹೇಳಿದರೆ, ಇವತ್ತೇ ಅದಕ್ಕೆ ಒಪ್ಪಿಗೆ ಕೊಡುತ್ತೇವೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.— ಸಾರ್ವಜನಿಕ ಸಭೆಯಲ್ಲಿ ಬಹಿರಂಗವಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ತಾವು ಆಶ್ವಾಸನೆ ಕೊಟ್ಟಿದ್ದೀರಿ, ಅದನ್ನು ಈಡೇರಿಸಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.— ಸಾರ್ವಜನಿಕ ಸಭೆಯಲ್ಲಿ ಮನವಿ ಪತ್ರ ಕೊಟ್ಟಿರುವವರು ಅವರೇ. ಆ ಕೆಲಸಕ್ಕೆ ಆದ್ಯತೆ ಕೊಡಿ, ಇದನ್ನು ಬಿಡಿ ಎಂದು ಹೇಳಿದರೆ ಈಗಲೇ ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಸಾಕಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ನಿರ್ಣಯ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಅದನ್ನು ಪರಿಶೀಲನೆಮಾಡುತ್ತೇನೆಂದು ಹೇಳಿದ್ದೇನೆ. ಸರ್ಕಾರದಲ್ಲಿ ಸ್ವಲ್ಪ ತೊಂದರೆಗಳು ಇದೆ. ಈ ಮೂರು ಕೆಲಸಗಳ ಕಡೆಗೆ ಗಮನ ಕೊಡುತ್ತೇನೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.— ಮಾನ್ಯ ಅಧ್ಯಕ್ಷರೇ, ಇದು ಅವರ ಕ್ಷೇತ್ರಕ್ಕೆ ಸಂಬಂಧ ಪಟ್ಟ ಪ್ರಶ್ನೆಯನ್ನು ನಾನು ಕೇಳುತ್ತಿಲ್ಲ. ಅವರ ಪ್ರಶ್ನೆಗೆ ನೇರವಾದ ಉತ್ತರವನ್ನು ಕೊಟ್ಟಿಲ್ಲ. ಆ ಜಿಲ್ಲೆಯ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ಕೊಟ್ಟಿದ್ದೀರಿ, ನೀರಾವರಿಗೆ ಎಷ್ಟು ಕೊಟ್ಟಿದ್ದೀರಿ ? ನಾನು ಕೇಳುತ್ತಿರುವುದು ಯಾದಗಿರಿ ತಾಲ್ಲೂಕಿನದಲ್ಲ. ಇವೊತ್ತಿನ ದಿವಸ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವುದು ಹಿಂದುಳಿದ ಪ್ರದೇಶವೆಂದು ತಮಗೇ ಗೊತ್ತಿದೆ. ಆ ಭಾಗಕ್ಕೆ ಎಷ್ಟು ದುಡ್ಡನ್ನು ಒದಗಿಸಿದ್ದೀರಿ ? ಬೇರೆ ಕಡೆಗೆ ಹೆಚ್ಚಿನ ದುಡ್ಡು ಒದಗಿಸಿದ್ದೀರಿ. ಆದರೆ ಅಲ್ಲಿ ಹೆಚ್ಚಿನ ದುಡ್ಡು ಒದಗಿಸಿ ಕೊಟ್ಟೂ ಕೂಡ ಕೆಲಸ ಪ್ರಾರಂಭವಾಗುತ್ತಿಲ್ಲ. ಟೋಕನ್ ಗ್ರ್ಯಾಂಟ್ ಕೊಡುತ್ತಿಲ್ಲ. ಆ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ನೇರವಾಗಿ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ಇದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಬಡ್ಜೆಟ್ಟಿನಲ್ಲಿ ಇಟ್ಟಿರತಕ್ಕಂತಹ ಎಸ್ಟಿಮೇಟ್ ಏನಿದೆ, ಅದರಲ್ಲಿ ಅವರು ಕೊಟ್ಟಿರತಕ್ಕಂಥಾದ್ದನ್ನು ಹಾಕಿದ್ದೇವೆ. ಯಾವುದು ಒಂದಕ್ಕೆ ಎರಡರಷ್ಟಾಗುತ್ತದೆ, ಅಂಥಾದಕ್ಕೆ ಒಂದು ಫಾರ್ಮಾಲಿಟೀಸ್ ಇದೆ. ಇರ್‌ರ್‌ಸ್ಪೆಕ್ಟೀವ್ ಆಗಿ ಎಲ್ಲಾ ಕ್ಷೇತ್ರಗಳನ್ನು ತೆಗೆದುಕೊಳ್ಳುತ್ತೇವೆ. ಈ ಮೂರು ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದ್ದೇನೆ. ಹೆಚ್ಚಿನ ಕೆಲಸವನ್ನು ಅವರ ಕ್ಷೇತ್ರದಲ್ಲಿ ತೆಗೆದುಕೊಂಡಿದ್ದೇವೆ. ಅದು ಅವರಿಗೋಸ್ಕರವೆಂದು ಅಲ್ಲ. ಆ ಪ್ರದೇಶ ಹಿಂದುಳಿದಿದೆ ಎಂದು ಅದಕ್ಕೆ ಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ.

ರಾಜ್ಯದ ಕರಾವಳಿ ತೀರದಲ್ಲಿ ಸಮುದ್ರ ಕೊರೆತದ ಬಗ್ಗೆ

೧೩೭. ಶ್ರೀ ಆರ್. ಎನ್. ನಾಯ್ಕ (ಭಟ್ಕಳ್).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚಿನ ಮೂರು ವರ್ಷಗಳಲ್ಲಿ ರಾಜ್ಯದ ತೀರ ಪ್ರದೇಶಗಳಲ್ಲಿ ಎಷ್ಟು ಕಡೆ ಸಮುದ್ರ ಕೊರೆತ ಉಂಟಾಗುತ್ತಿರುವುದನ್ನು ಗುರುತಿಸಲಾಗಿದೆ ?

ಆ) ಅವು ಎಲ್ಲೆಲ್ಲಿ ಆಗಿವೆ ?

ಇ) ಸಮುದ್ರ ಕೊರೆತ ತಡೆಯುವುದರ ಬಗ್ಗೆ ಎಲ್ಲೆಲ್ಲಿ ಕ್ರಮ ಜರುಗಿಸಲಾಗಿದೆ ? ಹಾಗೂ ಅದಕ್ಕೆ ಖರ್ಚಾದ ಹಣವೆಷ್ಟು ?

ಈ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕರ್ಕಿ ಗ್ರಾಮದ ರಾಮೇಶ್ವರ ಕಂಚಿ ಶೆಡಿಕಳಿ ಜಾಗದಲ್ಲಿ ಸಮುದ್ರ ಕೊರೆತ ನಡೆಯುತ್ತಿರುವುದನ್ನು ಯಾವಾಗ ಗುರುತಿಸಲಾಗಿತ್ತು ? ಆದರಿಂದ ಅಲ್ಲಿ ಈಗ ಎಷ್ಟು ಎಕರೆ ಜಮೀನು ನಾಶವಾಗಿದೆ ?

ಉ) ಸಮುದ್ರ ಕೊರೆತ ತಡೆಯಲು ಈ ತನಕ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಳ.

ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ೧) ದೊಡ್ಡಕೊಪ್ಪ, ೨) ಕಂಲೈ, ೩) ಗುಗ್ಗಕೊಪ್ಪ ಮತ್ತು ಳ) ಹೊಸಬೆಟ್ಟು ಗ್ರಾಮಗಳಲ್ಲಿ

ಇ) ದೊಡ್ಡಕೊಪ್ಪ ಮತ್ತು ಕಂಲೈ ಗ್ರಾಮಗಳಲ್ಲಿ ಸಮುದ್ರ ಗೋಡೆ ನಿರ್ಮಿಸಲು ಕ್ರಮವಾಗಿ ೨೨.೭೦ ಲಕ್ಷ ರೂ. ಮತ್ತು ೧೨.೭೦ ಲಕ್ಷ ರೂ. ಗಳ ಅಂದಾಜುಗಳನ್ನು ಮಂಜೂರು ಮಾಡಲಾಗಿದೆ. ಗುಡ್ಡಕೊಪ್ಪ ಮತ್ತು ಹೊಸಬೆಟ್ಟು ಕೆಲಸಗಳ ಅಂದಾಜುಗಳನ್ನು ತಯಾರಿಸಲಾಗುತ್ತಿದೆ. ಈ ಕೆಲಸಗಳಿಗಾಗಿ ಈವರೆಗೆ ಏನೂ ವೆಚ್ಚವಾಗಿಲ್ಲ.

ಈ) ೧೯೮೨ ರಲ್ಲಿ ಗುರುತಿಸಲಾಗಿತ್ತು. ಸುಮಾರು ೧೫ ಎಕರೆ ಜಮೀನು ಹಾನಿಗೊಳಗಾಗಿದೆ.

ಉ) ರಾಜ್ಯದ ಹಣಕಾಸಿನ ಲಭ್ಯತೆಯನ್ನವಲಂಬಿಸಿ ಸಮುದ್ರ ಗೋಡೆಗಳನ್ನು ಹಂತ ಹಂತವಾಗಿ ನಿರ್ಮಿಸಲಾಗುತ್ತಿದೆ.

ಶ್ರೀ ಆರ್. ಎನ್. ನಾಯಕ್.—ನಾನು ಪ್ರಶ್ನೆ ಕೇಳಿದ್ದೇನೆಂದರೆ, ರಾಜ್ಯದಲ್ಲಿ ಎಷ್ಟು ಕಡೆ ಸಮುದ್ರ ಕೊರೆತ ಇದೆ ಎಂದು. ಅದಕ್ಕೆ ಉತ್ತರವಾಗಿ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ಕು ಸ್ಥಳಗಳನ್ನು ಗುರುತಿಸಲಾಗಿದೆಯೆಂದು ಹೇಳಿದ್ದೀರಿ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ಆಗಲಿಲ್ಲವೇ ? ಅದು ನಿಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ೧೯೮೨ನೇ ಇಸವಿಯಲ್ಲಿ ಇದನ್ನು ಗುರುತಿಸಲಾಗಿದೆ. ಹೊನ್ನಾವರ ತಾಲ್ಲೂಕಿನ ರಾಮೇಶ್ವರ ಕಂಬಿ ಎಂಬಲ್ಲಿ ಸಮುದ್ರ ಕೊರೆತವಾಗಿರುವುದು ೧೫ ಎಕರೆ ಎಂದು ತೋರಿಸಿದ್ದೀರಿ. ಅದು ಇನ್ನೂ ಜಾಸ್ತಿ ಇದೆ. ಹೊನ್ನಾವರ ತಾಲ್ಲೂಕಿನ ರಾಮೇಶ್ವರ ಕಂಬಿ ಹಾಗೂ ಮಾಲೆಕರವಿಯಲ್ಲಿ ಬಹಳಷ್ಟು ತೆಂಗಿನ ಗಿಡಗಳು ಹಾನಿಗೊಳಗಾಗಿವೆ. ಅವರಿಗೆ ಇನ್ನೂ ಪುನರ್‌ವಸತಿ ಕೊಟ್ಟಿಲ್ಲ. ಅದು ಸರ್ಕಾರದ ಗಮನಕ್ಕೆ ಇನ್ನೂ ಬಂದಿಲ್ಲವೇ ? ಇದು ೧೯೮೨ನೇ ಇಸವಿಯಲ್ಲಿ ಗುರುತಿಸಲಾಗಿದ್ದರೂ ಈ ತನಕ ಸರ್ಕಾರ ಏನೂ ಮಾಡಿಲ್ಲವೇ ? ಅಲ್ಲಿ ಸಮುದ್ರ ಕೊರತವಾಗಿದೆ, ಮನೆಗಳು ಹೋಗಿದೆ, ಅದರ ಬಗ್ಗೆ ಅಧಿಕಾರಿಗಳು ಏನಂ ಮಾಡಿದರು ? ರಾಜ್ಯದ ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ಸಮುದ್ರದ ಗೋಡೆಗಳನ್ನು ಹಂತಹಂತವಾಗಿ ಕಟ್ಟುತ್ತೇವೆಂದು ಹೇಳಿದ್ದಾರೆ. ಇದು ಬಹಳ ಮುಖ್ಯವಾದ ವಿಚಾರ. ನೆರೆ ರಾಜ್ಯವಾದ ಕೇರಳದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಮುದ್ರ ಕೊರೆತವಿದ್ದು ಅದನ್ನು ಅವರು ತಡೆಗಟ್ಟಿದ್ದಾರೆ. ಅಲ್ಲಿ ಅದು ಫಲಪ್ರದವಾಗಿದೆ. ಅಲ್ಲಿ ಇದನ್ನು ಮಾಡಂವ್ದಕ್ಕಾಗುತ್ತದೆ. ನಮ್ಮ ರಾಜ್ಯದಲ್ಲಿ ಏಕೆ ಇದನ್ನು ಮಾಡುವುದಕ್ಕಾಗುವುದಿಲ್ಲ ? ಸಮುದ್ರ ಕೊರತಕ್ಕೆ ಕಲ್ಲು ಹಾಕಿದ್ದನ್ನು ನೋಡಿದ್ದೇನೆ. ನಮ್ಮ ರಾಜ್ಯದಲ್ಲಿ ಚಿಕ್ಕ ಚಿಕ್ಕ ಬಂಡೆಗಳನ್ನು ಸಮುದ್ರಕ್ಕೆ ಹಾಕಿದರೆ ಆಗುವುದಿಲ್ಲ. ಕೇರಳಾದಲ್ಲಿ ಬಹಳ ಬಲವಾದ ಸಿಮೆಂಟ್ ಗೋಡೆ ಹಾಕಿ, ಬಹಳ ದೊಡ್ಡ ದೊಡ್ಡ ಬಂಡೆಗಳನ್ನು ಹಾಕಿ ಸಾಕಷ್ಟು ಹಣ ಖರ್ಚುಮಾಡಿ ಭದ್ರವಾಗಿ ಮಾಡಿದ್ದಾರೆ. ಇಲ್ಲಿಯೂ ಸಹ ಅದೇ ರೀತಿ ಏತಕ್ಕೆ ಮಾಡಲಿಕ್ಕೆ ಆಗುವುದಿಲ್ಲ ? ಈ ವಿಚಾರದಲ್ಲಿ ಹಣ ಪಡೆಯಲ್ಲಿಕ್ಕೆ ಕೇಂದ್ರ ಸರ್ಕಾರದವರ ಜೊತೆ ಸಂಪರ್ಕ ಮಾಡಿದ್ದಾರೆಯೆ ? ಉತ್ತರ ಕನ್ನಡ ಜಿಲ್ಲೆ ಸರ್ವನಾಶವಾಗುತ್ತಿದೆ. ನ್ಯಾಷನಲ್ ಹೈವೇ ಕಡಿದು ಹೋಗುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಇತ್ತೀಚಿನ ಮೂರು ಪರ್ಷಗಳಲ್ಲಿ ಎಷ್ಟು ಕಡೆ ಸಮುದ್ರ ಕೊರತ ಉಂಟಾಗಿದೆ ಎಂದು. ಈಗ ವಿವರಣೆ ಕೊಟ್ಟಿರುವುದೂ ಫ್ಲಡ್ ಡ್ಯಾಮೇಜಸ್‌ನಲ್ಲಿ ಆಗಿರತಕ್ಕದ್ದು ದು. ಆ ಕರ್ಕ ಗ್ರಾಮದ್ದು ಮೊನ್ನೆ ಪ್ರವಾಹ ಬಂದಾಗ ಅನಾಹುತವಾಗಿದೆ. ಸಮುದ್ರದ ಕೊರೆತದ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿದ್ದೀರಿ ಎಂದು ಕೇಳಿದಿರಿ, ನಾವು ೧೫೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ ಒಂದು ಮಾಸ್ಟರ್ ಪ್ಲಾನ್ ಮಾಡಿ, ನಾನೂ ಸಹ ಹೋಗಿ ಹೇಳಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ, ಪ್ರಧಾನ ಮಂತ್ರಿಗಳಿಗೂ ಹೇಳಿದ್ದೇವೆ. ಕರ್ನಾಟಕ ರಾಜ್ಯದಿಂದ ಹೋಗಿರತಕ್ಕ ಪ್ರತಿಯೊಬ್ಬ ಮಂತ್ರಿಗಳ ಮನೆಗೂ ಹೋಗಿ, ಮಾಸ್ಟರ್ ಪ್ಲಾನ್ ಕಾಪಿ ಕೊಟ್ಟು, ಕೇರಳಾಕ್ಕೆ ಫೈನಾನ್ಸ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ, ದಯಮಾಡಿ ಏನಾದರೂ ಮಾಡಿ ಎಂದು ಹೇಳಿದ್ದೇವೆ. ಇವ್ನು ಪ್ರವಾಹ ಬಂದಾಗ ಆಗಿರುವ ಬಗ್ಗೆ ನಾವು ಜಿಲ್ಲಾಧಿಕಾರಿಯಂವರಿಂದ ವಿವರಣೆ ತರಿಸಬೇಕಾಗಂತ್ತದೆ ಅದನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದು ಫ್ಲಡ್ ಡ್ಯಾಮೇಜ್ ಎಂದು ಕನ್‌ವರ್ಟ್ ಮಾಡಿಕೊಂಡರು. ಈ ವರ್ಷ ಫ್ಲಡ್ ಬಂದೇ ಇಲ್ಲ. ೧೯೮೦ನೇ ಇಸವಿಯಲ್ಲಿ ಫ್ಲಡ್ ಬಂದಿದ್ದು. ಶರಾವತಿ ನದಿಗೆ ಫ್ಲಡ್ ಬಂದಿಲ್ಲ. ಸಮುದ್ರ ಕೊರೆತ ಇವೊತ್ತಿಗೂ ಆಗುತ್ತಿದೆ. ಮಲ್ಲುಕಂಡುವಿ ರಾಮೇಶ್ವರ ಕಂಬಿ, ಗ್ರಾಮದಲ್ಲಿ ತೆಂಗಿನ ಗಿಡಗಳು ಹೋಗಿವೆ. ಇದೆಲ್ಲಾ ಸಮುದ್ರ ಕೊರೆತದಿಂದಾಗಿದೆ ಎಂದು ತಿಳಿದುಕೊಳ್ಳಬೇಕು. ಫ್ಲಡ್ ಡ್ಯಾಮೇಜಸ್ ಆಗಿದ್ದರೆ ಪರಿಹಾರ ಕ್ರಮ ಕೈಗೊಳ್ಳಲಿಕ್ಕೆ ಎಷ್ಟು ಹಣ ಸರ್ಕಾರ ಇಟ್ಟಿದೆ. ಪರಿಹಾರದ ಕೆಲಸ ನಡೆಯುತ್ತಿದೆಯೇ ? ಇಲ್ಲ, ಇನ್ನು ಮುಂದೆ ನಡೆಯುತ್ತದೆಯೇ ? ಇಲ್ಲ, ಯಾವಾಗ ನಡೆಯುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಆ ಕ್ಷೇತ್ರದ ಸದಸ್ಯರಾಗಿರತಕ್ಕ ಶ್ರೀಮಾನ್ ಗಳಿಡರು ನನ್ನ ಹತ್ತಿರ ಬಂದು ಈ ವಿಷಯ ಚರ್ಚೆ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಫೋಟೋಗಳನ್ನು ತಂದು ತೋರಿಸಿದ್ದಾರೆ. ಬಡಗಣಿ ಹೊಳೆ ಸಮುದ್ರಕ್ಕೆ ಸೇರತಕ್ಕ ಜಾಗ. ಹೊಳೆ ಪ್ರವಾಹ ಬಂದಿದ್ದರಿಂದ ಅಪಾಯವಾಗಿದೆ. ಅವರು ಮನವಿಯನ್ನು ಕೂಡ ಕೊಟ್ಟಿದ್ದಾರೆ. ಬಡಗಣಿ ಹೊಳೆ ಒಂದು ಕಡೆಯಿಂದ ಬರುತ್ತದೆ, ಸನುದ್ರದ ನೀರು ಸೇರತಕ್ಕ ಪ್ರದೇಶದಲ್ಲಿ ಮನೆಗಳಿಗೆ ಅಪಾಯವಾಗಿರತಕ್ಕದ್ದು, ತೋಟಗಳಿಗೆ ಅಪಾಯವಾಗಿರತಕ್ಕದ್ದು ತೋರಿಸಿದ್ದಾರೆ. ಇದನ್ನು ಫ್ಲಡ್ ಡ್ಯಾಮೇಜಸ್ ಎಂದು ಕ್ಲಾಸಿಫೈ ಮಾಡಿದ್ದೇವೆ. ನಮ್ಮ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಜಿಲ್ಲಾಧಿಕಾರಿಗಳಿಂದ ವಿವರಣೆ ತರಿಸಬೇಕು. ಇದು ನೇರವಾಗಿ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಹೋಗ ಬೇಕಾಗುತ್ತದೆ, ನಮಗೆ ಬರುವುದಿಲ್ಲ. ಅದು ಏನೇ ಆದರೂ ಸರ್ಕಾರದ ಜವಾಬ್ದಾರಿ. ಇದರ ಬಗ್ಗೆ ಇವೊತ್ತು ಸಂಜೆಯೊಳಗೆ ವರದಿಯನ್ನು ತರಿಸಲಿಕ್ಕೆ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಎಷ್ಟು ಹಣ ಬಿಡುಗಡೆ ಮಾಡಬೇಕು, ಯಾವರೀತಿಯಲ್ಲಿ ಕಾರ್ಯ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವ ಬಗ್ಗೆ ಸರ್ಕಾರ ಶೀಘ್ರವಾಗಿ ಒಂದು ತೀರ್ಮಾನವನ್ನು ಮಾಡುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೆ, ಮಾನ್ಯ ಸಚಿವರು ಸಮುದ್ರದ ಕೊರೆತ ಮತ್ತು ಅದಕ್ಕೆ ಬೇಕಾದಂಥ ವ್ಯವಸ್ಥೆ ಮಾಡುವುದನ್ನು ಹೇಳಿದ್ದಾರೆ. ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಉಲ್ಲಾಳ್‌ನಿಂದ ಕುಂದಾಪುರ್‌ದವರೆಗೆ ವಿಶೇಷ ಕೊರೆತ ಆಗಿದೆ. ಸುಮಾರು ೭೦೦-೮೦೦ ಮೀಟರ್‌ಷ್ಟು ಆಗಿದೆ. ಈ ಹಾನಿಯಿಂದಾಗಿ ೩೨ ಮನೆಗಳು ನಾಶವಾಗಿವೆ. ಈಗ ಸಮುದ್ರದ ಕೊರೆತಕ್ಕೆ ಸಣ್ಣ ಕಲ್ಲು ಹಾಕತಕ್ಕ ವ್ಯವಸ್ಥೆ ಏನು ಮಾಡಿದ್ದಾರೆ ಅದು ಅನಾವಶ್ಯಕವಾದ ವೆಚ್ಚ. ಆದ್ದರಿಂದ, ಅಲ್ಲಿ ದೊಡ್ಡ ಕಲ್ಲುಗಳನ್ನು ಹಾಕಿ ತಡೆಗೋಡೆ ಹಾಕತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.— ಸಣ್ಣ ಕಲ್ಲು ಹಾಕುವ ಪ್ರಶ್ನೆಯೇ ಇಲ್ಲ. ಅದಕ್ಕೆ ಸ್ಪೆಸಿಫಿಕೇಷನ್ ಇದೆ. ನಮ್ಮ ರಿಸರ್ಚ್ ಸ್ಟೇಷನ್‌ನವರು ಕೊಟ್ಟಿರತಕ್ಕ ಸ್ಪೆಸಿಫಿಕೇಷನ್ ಆಧಾರದ ಮೇಲೆ ಈ ಕೆಲಸ ಮಾಡಬೇಕು. ಸಣ್ಣ ಕಲ್ಲು ಹಾಕತಕ್ಕದ್ದು ಅಕ್ರಮ. ಹಿಂದೆ ನಡೆದು ಹೋಗಿರುವುದಕ್ಕೆ ನಾನು ಶಂಖಿ ಹೊಡೆದು ಏನು ಮಾಡಲಿ ಅಲ್ಲಿ ನಮ್ಮ ಚಿಕ್ಕಪ್ಪನ ಮಗ ಯಾರೂ ಇಲ್ಲ. ನಾವು ಬಂದಮೇಲೆ ನಡೆದಿದ್ದರೆ ಹೇಳಿ. ಪ್ರತಿಯೊಂದು ಕೆಲಸವನ್ನು ನಾನು ಹೋಗಿ ನೋಡಲಿಕ್ಕೆ ಆಗಿಲ್ಲ. ಮೊದಲು ಈ ಪೋರ್ಟ್ ವಿಂನಿಸ್ಟರ್ ಬೇರೆ ಇದ್ದರು. ಪ್ರತಿಯೊಂದು ವಿಷಯಕ್ಕೂ ನಾನು ವಿವರಣೆ ಕೊಡಲಿಕ್ಕೆ ಹೋಗುವುದಿಲ್ಲ. ನಾನು ತಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ನಮ್ಮ ಕಾಲದಲ್ಲಿ ಸ್ಪೆಸಿಫಿಕೇಷನ್‌ಗೆ ವಿರುದ್ಧವಾಗಿ ಕೆಲಸ ಮಾಡಿದ್ದರೆ ಈ ಅಧಿವೇಶನದಲ್ಲೇ ಪನಿಷ್‌ಮೆಂಟ್ ಅನಾನ್ಸ್ ಮಾಡುತ್ತೇನೆ.

ಒಬ್ಬ ಸದಸ್ಯರು.—ಅಧ್ಯಕ್ಷರೆ, ಕಾರವಾರದ ರಾಷ್ಟ್ರೀಯ ಹೆದ್ದಾರಿ ನಂ. ೧೭ ಸಮುದ್ರ ಕೊರತದಿಂದ ನಾಶವಾಗುತ್ತಿದೆ. ಇದು ಈ ವರ್ಷ ಆದಂಥ ಘಟನೆಯಲ್ಲ, ಮೂರು ವರ್ಷದಿಂದ ಸತತವಾಗಿ ಸಮುದ್ರ ಕೊರೆತದಿಂದ ರಾಷ್ಟ್ರೀಯ ಹೆದ್ದಾರಿ ನಂ. ೧೭ಕ್ಕೆ ಹಾನಿಯುಂಟಾಗಿದೆ. ಸರ್ಕಾರದವರು ತಾತ್ಕಾಲಿಕವಾಗಿ ಕಾರ್ಯ ಕೈಗೊಳ್ಳತಕ್ಕದ್ದು ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರದವರು ಪರವು ನೆಂಟಾಗಿ ಏನಾದರೂ ಪರಿಹಾರ ಕಾರ್ಯ ಕೈಗೊಳ್ಳುತ್ತಾರೆಯೇ ಎನ್ನುವುದನ್ನು ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ಪ್ರವಾಹದಿಂದ ಆಗಿರತಕ್ಕದ್ದು ಸರಿಪಡಿಸಿ, ಸಾರ್ವಜನಿಕರಿಗೆ ಸೌಲಭ್ಯ ಒದಗಿಸುವುದಕ್ಕೆ, ರಸ್ತೆಯನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಮಾಡಿಸುತ್ತೇನೆ.